ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
[ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.]
ಅಧೀಕ್ಷಕ ಇಂಜನೀಯರ(ವಿ), ರವರ ಕಛೇರಿ,
ರಿ.ಸ.ನಂ : ೮೫ಬ, ಬಿ.ಇ.ಓ/ ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರಿ ಆಫೀಸ್ ಹತ್ತಿರ,
ಹಂಚಿನಾಳ ಲೇಔಟ್, ಪೂ.ಬೆಂ. ರಸ್ತೆ, ಹಾವೇರಿ – 581110.

HUBLI ELECTRICITY SUPPLY COMPANY LIMITED
[Wholly owned Govt. of Karnataka undertaking]
O/ O Superintending Engineer(Ele),
Reg No : 85B, Near B.E.O/ Haveri Urban Development Authority Office,
Hanchinal Layout, P.B. Road, Haveri-581110.

TelephoneNo. : 08375-232632
Fax No: : 08375-232625

Web Site : www.hescom.karnataka.gov.in
E-mail ID : seehvr.hescom@gmail.com
: dcahaveri@yahoo.com

Corporate Identity (CIN) : U31401KA2002SGC030437.

# ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ
# ಹು.ವಿ.ಸ.ಕಂ.ನಿ, ಹಾವೇರಿ.

**ಹಾಜರಿದ್ದವರು,**
1] ಶ್ರೀ. ನಾಗಪ್ಪ. ಎಸ್. ಹೆಚ್, ಅಧೀಕ್ಷಕ ಇಂಜಿನೀಯರ(ವಿ) ಹಾಗೂ ಅಧ್ಯಕ್ಷರು.
2] ಶ್ರೀಮತಿ. ರೇಣುಕಾ. ಎಲ್. ತೆಂಬದ, ಸದಸ್ಯರು.
3] ಶ್ರೀ.ಗುರುಬಸಪ್ಪ. ಎಸ್. ಮಾಗಾವಿ, ಸದಸ್ಯರು.

**ಪ್ರಕರಣ ಸಂಖ್ಯೆ : 01.**

**ಶ್ರೀಮತಿ. ಸುಶೀಲಾ. ವಿ. ಕೆರೂಡಿ, ಕೆರೂಡಿ ಕಾಂಪ್ಲೆಕ್ಸ್,
ಅಶೋಕ ವೃತ್ತ, ರಾಣೇಬೆನ್ನೂರ, ತಾ॥ ರಾಣೇಬೆನ್ನೂರ,
ಜಿ॥ ಹಾವೇರಿ, ಪಿನ್ ಕೋಡ್ : 581115.** -------- **ದೂರುದಾರರು.**
**ವಿರುದ್ಧ,**
**ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ),
ಕಾರ್ಯ & ಪಾಲನಾ ಉಪ-ವಿಭಾಗ-1, ಹೆಸ್ಕಾಂ,
ರಾಣೇಬೆನ್ನೂರ.** -------- **ಪ್ರತಿವಾದಿ.**

1. **ಪ್ರಕರಣದ ಸಾರಾಂಶ ಕೆಳಗಿನಂತಿರುತ್ತದೆ :-**

I. ಅರ್ಜಿದಾರರಾದ ಶ್ರೀಮತಿ. ಸುಶೀಲಾ. ವಿ. ಕೆರೂಡಿ, ಕೆರೂಡಿ ಕಾಂಪ್ಲೇಕ್ಸ್, ಅಶೋಕ ವೃತ್ತ, ರಾಣೇಬೆನ್ನೂರ ಇವರು ಕರ್ನಾಟಕ ವಿದ್ಯುತ್ ನಿಯಂತ್ರಣಾ ಆಯೋಗ [ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ ಮತ್ತು ಓಂಬುಡ್ಸಮನ್] ನಿಯಮಗಳು-2004 ಮತ್ತು ತಿದ್ದುಪಡಿ ಆದೇಶ ಸಂಖ್ಯೆ : ಡಿ/ 37/ 03, ದಿನಾಂಕ : 10.05.2013 ರಡಿಯಲ್ಲಿ ಒದಗಿಸಲಾದ ಅವಕಾಶದಡಿಯಲ್ಲಿ ದೂರನ್ನು ದಾಖಲಿಸಿ ದಿನಾಂಕ : 26.07.2022 ರಂದು [ಸಿ.ಜಿ.ಆರ್.ಎಫ್] ವೇದಿಕೆಗೆ ಅರ್ಜಿ ಸಲ್ಲಿಸಿರುವರು. ಡಾ ॥ ವ್ಹಿ. ಎಮ್. ಕೆರೂಡಿ ಇವರು ಗ್ರಾಹಕರ ಪರವಾಗಿ ಪ್ರತಿನಿಧಿಯಾಗಿರುವರು.

II. ಅರ್ಜಿದಾರರು ಶ್ರೀಮತಿ. ಸುಶೀಲಾ. ವಿ. ಕೆರೂಡಿ ಇವರ ನೆಲ ಮಹಡಿ ಕಟ್ಟಡಕ್ಕೆ 3+3 ಕಿ. ವ್ಯಾ ವಿದ್ಯುತ್ ಪೂರೈಸಲು ದಿನಾಂಕ : 13.09.2021 ರಂದು ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ(ವಿ), ಕಾರ್ಯ & ಪಾಲನಾ ಉಪ-ವಿಭಾಗ-1, ಹೆಸ್ಕಾಂ, ರಾಣೇಬೆನ್ನೂರ ರವರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

III. ಕಂಪನಿಯ ನಿಯಮಾನುಸಾರ ಸೋಲಾರ್ ವಾಟರ್ ಹೀಟರ್ ಅಳವಡಿಸಿದ ನಂತರ ಶ್ರೀಮತಿ. ಸುಶೀಲಾ. ವಿ. ಕೆರೂಡಿ ಇವರ ಸ್ಥಾವರಕ್ಕೆ 3+3 ಕಿ.ವ್ಯಾ ವಿದ್ಯುತ್ ಪೂರೈಸುವಲ್ಲಿ ಆವರಣದಲ್ಲಿರುವ ಎಲ್ಲ ಕಟ್ಟಡಗಳನ್ನು ಒಟ್ಟುಕೂಡಿಸಿ ವಿದ್ಯುತ್ ಭಾರವನ್ನು ಪರಿಗಣಿಸಿ ಅಭಿವೃದ್ಧಿ ಶುಲ್ಕವನ್ನು ಭರಣ ಮಾಡಲು ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ(ವಿ), ರಾಣೇಬೆನ್ನೂರ ರವರ ಪತ್ರ ಸಂಖ್ಯೆ : 6522, ದಿನಾಂಕ : 18.01.2022, 7692, ದಿನಾಂಕ : 07.03.2022 & 2336-39, ದಿನಾಂಕ : 03.08.2022 ರಂದು ಪತ್ರದ ಮೂಲಕ ಸದರಿ ಗ್ರಾಹಕರಿಗೆ ತಿಳಿಸಿರುತ್ತಾರೆ.

IV. ಅರ್ಜಿದಾರರು ಸದರಿ ಕಟ್ಟಡವು ಪ್ರತ್ಯೇಕವೆಂದು ಪರಿಗಣಿಸಿ ಅಭಿವೃದ್ಧಿ ಶುಲ್ಕವು ಮೊದಲ 3 ಕಿ.ವ್ಯಾ ಯಾವುದೇ ಅಭಿವೃದ್ಧಿ ಶುಲ್ಕ ಇರುವುದಿಲ್ಲ ಮತ್ತು ಹೆಚ್ಚಿನ 3 ಕಿ.ವ್ಯಾ ಭಾರಕ್ಕೆ ರೂ.650=00 ಪ್ರತಿ ಕಿ.ವ್ಯಾ ಅಂತೆ ಒಟ್ಟು : 1950=00 ಗಳನ್ನು ಭರಣ ಮಾಡಲು ಬದ್ಧನಿರುತ್ತೇನೆಂದು ತಿಳಿಸಿರುತ್ತಾರೆ.

2. **ಅರ್ಜಿದಾರರ ವಾದಗಳು** :-

ಗ್ರಾಹಕರ ಪರವಾಗಿ ಹಾಜರಿದ್ದ ಶ್ರೀ. ಡಾ ॥ ವ್ಹಿ. ಎಮ್. ಕೆರೂಡಿ ರವರು ವಿಚಾರಣೆಯ ದಿನ ತಮ್ಮ ವಾದವನ್ನು ಈ ಕೆಳಗಿನಂತೆ ಮಂಡಿಸಿರುತ್ತಾರೆ.

I. ಸದರಿ ಕಟಡ್ಡವು ಈ ಹಿಂದೆ "ಎ" ಬ್ಲಾಕ್ ಆರ್.ಆರ್ ನಂ : 366 ಎ.ಇ.ಹೆಚ್ ಇದ್ದು ಸದರಿ ಕಟ್ಟಡವನ್ನು ಕೆಡವಿ ಹೊಸದಾದ ಕಟ್ಟಡವನ್ನು ನಿರ್ಮಾಣ ಮಾಡಲಾಗಿರುತ್ತದೆ, ಹಳೇ ಮಾಪಕ/ ಸ್ಥಾವರವನ್ನು ಶಾಶ್ವತವಾಗಿ ವಿದ್ಯುತ್ ನಿಲುಗಡಗೊಳಸಲಾಗಿರುತ್ತದೆ ಹಾಗೂ ಈ ಹೊಸದಾಗಿ ನಿರ್ಮಿಸಿರುವ ಕಟ್ಟಡವು ನಾಲ್ಕು ಅಂತಸ್ತಿನ ಕಟ್ಟಡವಾಗಿರುತ್ತದೆ, ಸದರಿ ಕಟ್ಟಡ ಬಗ್ಗೆ ನಕಾಶೆ ಹಾಗೂ ಇ-ಸ್ವತ್ತು ಮತ್ತು ಪರಿವಾನಿಗೆಯನ್ನು ಲಗತ್ತಿಸಲಾಗಿರುತ್ತದೆ ಹಾಗೂ ಪ್ರತ್ಯೇಕ ಕಟ್ಟಡವಾಗಿರುತ್ತದೆ. ಈ ಹಿಂದೆಯು ಹೆಸ್ಕಾಂ ಕಛೇರಿಗಳಂದ ನೀಡಿರುವ ಹಳೆಯ ದಾಖಲೆಗಳಲ್ಲಿ/ ಪತ್ರಗಳಲ್ಲಿ "ಎ" ಬ್ಲಾಕ್ ಕಟ್ಟಡವು ಪ್ರತ್ಯೇಕವೆಂದು ಎಂದು ನಮೂದಿಸಿದ್ದು ಇರುತ್ತದೆ.

II. ಸದರಿ "ಬಿ", "ಸಿ" & "ಇ" ಬ್ಲಾಕಗಳಿಗೆ ದಿನಾಂಕ : 06.10.1995 ರ ಕ್ಕಿಂತ ಪೂರ್ವದಲ್ಲಿ ಆಗಿನ ಚಾಲ್ತಿಯಲ್ಲಿ ಇರುವ ನಿಯಮಗಳ ಪ್ರಕಾರ ವಿದ್ಯುತ್ ಸಂಪರ್ಕವನ್ನು ನೀಡಿರುತ್ತಾರೆ. ಅದರನ್ವಯ ಈಗ ನಿರ್ಮಿಸಿರುವ ಕಟ್ಟಡವು "ಬಿ", "ಸಿ" & "ಇ" ಕಟ್ಟಡಗಳನ್ನು ಸೇರಿಸಿ/ ಪರಿಗಣಿಸುವುದು ಸೂಕ್ತವಲ್ಲ.

III. "ಬಿ", "ಸಿ" & "ಇ" ಬ್ಲಾಕಗಳ ಕಟ್ಟಡವು ಹೊಸದಾಗಿ ನಿರ್ಮಿಸಿರುವ ಕಟ್ಟಡಕ್ಕೆ ಅಂತರ ಕಾಯ್ದುಕೊಂಡಿರುತ್ತದೆ ಮತ್ತು ರಸ್ತೆಯಿಂದ ಪ್ರತ್ಯೇಕ ಮಾರ್ಗವಿರುತ್ತದೆ.

IV. ಸದರಿ ಆವರಣದಲ್ಲಿ ಇರುವ ಕಟ್ಟಡವು ಪ್ರತ್ಯೇಕವೆಂದು ಪರಿಗಣಿಸಬೇಕು.

V. ಅರ್ಜಿದಾರರು ಸದರಿ ಕಟ್ಟಡವು ಪ್ರತ್ಯೇಕವೆಂದು ಪರಿಗಣಿಸಿ ಅಭಿವೃದ್ಧಿ ಶುಲ್ಕವು ರೂ.6904=00 ಬದಲಾಗಿ ಮೊದಲ 3 ಕಿ.ವ್ಯಾ ಯಾವುದೇ ಅಭಿವೃದ್ಧಿ ಶುಲ್ಕ ಇರುವುದಿಲ್ಲ ಮತ್ತು ಹೆಚ್ಚಿನ 3 ಕಿ.ವ್ಯಾ ಭಾರಕ್ಕೆ ರೂ.650=00 ಪ್ರತಿ ಕಿ.ವ್ಯಾ ಅಂತೆ ಒಟ್ಟು : 1950=00 ಗಳನ್ನು ಭರಿಸಲು ವಿದ್ಯುತ್ ಮಂಜೂರಾತಿ ನೀಡಬೇಕೆಂದು ಕೋರಿರುತ್ತಾರೆ.

3. **ಪ್ರತಿ ವಾದಿಯವರ ವಾದಗಳು** :-

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ (ವಿ), ಕಾರ್ಯ & ಪಾಲನಾ ಉಪ-ವಿಭಾಗ-1, ಹೆಸ್ಕಾಂ, ರಾಣೇಬೆನ್ನೂರರವರ ವಾದಗಳು ಮತ್ತು ಅವರು ಸಲ್ಲಿಸಿರುವ ದಾಖಲೆಗಳು :-

I. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ (ವಿ), ಕಾರ್ಯ & ಪಾಲನಾ ಉಪ-ವಿಭಾಗ-1, ಹೆಸ್ಕಾಂ, ರಾಣೇಬೆನ್ನೂರರವರು ತಮ್ಮ ವಾದವನ್ನು ಮಂಡಿಸಿ, ಸದರಿ ಕಟಡ್ಡವು ಈ ಹಿಂದೆ "ಎ" ಬ್ಲಾಕ್ ಆರ್.ಆರ್ ನಂ : 366 ಎ.ಇ.ಹೆಚ್ ಇದ್ದು, ಸದರಿ ಕಟ್ಟಡವನ್ನು ಕೆಡವಿ ಹೊಸದಾದ ಕಟ್ಟಡವನ್ನು ನಿರ್ಮಾಣ ಮಾಡಲಾಗಿರುತ್ತದೆ, ಹಳೇ ಮಾಪಕ/ ಸ್ಥಾವರವನ್ನು ಶಾಶ್ವತವಾಗಿ ವಿದ್ಯುತ್ ನಿಲುಗಡೆಗೊಳಸಲಾಗಿರುತ್ತದೆ. ಹಾಗೂ ಹೊಸದಾಗಿ ನೆಲ ಮಹಡಿಯಲ್ಲಿ ಕಟ್ಟಿರುವ ಕಟ್ಟಡಗಳಲ್ಲಿ 2 ಸಂಖ್ಯೆ ಗೃಹಬಳಕೆ ಸಲುವಾಗಿ 3+3 ಕಿ.ವ್ಯಾ ವಿದ್ಯುತ್ ನೀಡಲು ಕೋರಿದ್ದು, ಅದರಂತೆ ಶಾಖಾಧಿಕಾರಿ, ನಗರ ಶಾಖೆ-2 ರವರು ಸ್ಥಳ ಪರಿಶೀಲನೆ ಮಾಡಿ ಸದರಿ ಕಟ್ಟಡದ ಜೊತೆಗೆ ಅದೇ ಆವರಣದಲ್ಲಿರುವ ಇನ್ನೂಳಿದ ಕಟ್ಟಡಗಳನ್ನು ಅಂದರೆ "ಬಿ", "ಸಿ" & "ಇ" ಎಂಬ ಬ್ಲಾಕ್‌ಗಳ [ಡಿ ಬ್ಲಾಕ್ ಬಿಟ್ಟು] [ಕಟ್ಟಡಗಳ] Builtup Area As KERC 6th Amendment [Recovery of Expenditure for Supply of Electricity] Regulation, 2004 vide Notification No : Y/ 01/ 4, Date : 7th September 2011, As there is no Separate Entrance to these building from Road side ಸದರಿ ಕಟ್ಟಡಗಳಿಗೆ ಸಂಬಂಧಿಸಿದ ಆರ್.ಆರ್ ನಂಬರ್‌ಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿರುತ್ತದೆ.

II. ಸದರಿ ಸ್ಥಳವನ್ನು ಸ್ಥಾನಿಕವಾಗಿ ಪರಿಶೀಲಿಸಲಾಗಿ ಈ ಹೊಸದಾಗಿ ನಿರ್ಮಿಸಿರುವ ಕಟ್ಟಡವು ನಾಲ್ಕು ಅಂತಸ್ತಿನ ಕಟ್ಟಡವಾಗಿರುತ್ತದೆ. ಆದರೆ ಕಟ್ಟಡ ಪರವಾನಿಗೆಯಲ್ಲಿ ನೆಲ ಮಹಡಿ ಕಟ್ಟಡಕ್ಕೆ ಮಾತ್ರ ಪರವಾನಿಗೆ ಪತ್ರವನ್ನು ನೀಡಿರುತ್ತಾರೆ. ಕಟ್ಟಡದ ಪರವಾನಿಗೆ ಪತ್ರದ ಚೆಕ್ಕುಬಂಧಿ ಪ್ರಕಾರ ಸದರಿ ಕಟ್ಟಡ ಮತ್ತು "ಬಿ", "ಸಿ", "ಡಿ" ಹಾಗೂ "ಇ" ಬ್ಲಾಕಗಳು ಒಂದೇ ಆವರಣದಲ್ಲಿ ಇರುತ್ತವೆ. ಆದರೆ "ಡಿ" ಹಾಗೂ "ಇ" ಬ್ಲಾಕಗಳಿಗೆ ರಸ್ತೆಯಿಂದ ಪ್ರತ್ಯೇಕ ದಾರಿ/ಪ್ರವೇಶ ಇರುತ್ತದೆ ಹಾಗೂ "ಎ" ಬ್ಲಾಕಗೆ ನಗರ ಸಭೆ ರಸ್ತೆಯಿಂದ ನೇರವಾಗಿ ದಾರಿ/ ರಸ್ತೆ ಇರುವುದಿಲ್ಲ. ಸದರಿ ಬ್ಲಾಕಿಗೆ ಹಾಗೂ "ಬಿ" ಮತ್ತು "ಸಿ" ಸೇರಿ ಮೂರು ಬ್ಲಾಕಗಳಿಗೆ "ಇ" ಬ್ಲಾಕಿನ ನೆಲ ಮಹಡಿಯ ಮುಖಾಂತರ ಸಾಮಾನ್ಯ ಮಾರ್ಗ [Common Passage] ಇರುತ್ತದೆ. ಆದ್ದರಿಂದ, ಆವರಣದಲ್ಲಿ ಇರುವ ಎಲ್ಲ ಕಟ್ಟಡಗಳನ್ನು ("ಎ" "ಬಿ" ಹಾಗೂ "ಸಿ") ಪರಿಗಣಿಸಿ ವಿಸ್ತರ್ಣವು [ಬಿಲ್ಟ್‌ಫ್ ಏರಿಯಾ] 648.99 ಚದರು ಮೀಟರ್‌ಗಳಾಗಿದ್ದು, ಈಗ ಕೇಳಿರುವ ಲೋಡ್ ಸೇರಿದಂತೆ ಎಲ್ಲ ಆರ್.ಆರ್ ನಂಬರ್ [ಮೇಲೆ ತಿಳಿಸಿರುವ ಕಟ್ಟಡಗಳ] ಗಳ ಒಟ್ಟು ಲೋಡ್ 18 ಕಿ.ವ್ಯಾ ಆಗುತ್ತದೆ. COS ಖಂಡಿಕೆ 3.1.1 ಪ್ರಕಾರ 15 ಕಿ. ವ್ಯಾ. ಗಿಂತ ಹೆಚ್ಚಿನ 3 ಕಿ.ವ್ಯಾ.ಗೆ ಪ್ರತಿ ಕಿ.ವ್ಯಾಗೆ 1300+ ಜಿ.ಎಸ್.ಟಿ ಕಿ.ವ್ಯಾನಂತೆ ರೂ. 4602/- ಹಾಗೂ 15 ಕಿ. ವ್ಯಾ. ವರೆಗಿನ 3 ಕಿ.ವ್ಯಾಗೆ ಪ್ರತಿ ಕಿ.ವ್ಯಾಗೆ 650+ ಜಿ.ಎಸ್.ಟಿ ಕಿ.ವ್ಯಾನಂತೆ ಒಟ್ಟು ರೂ.2302/- ಒಟ್ಟು ರೂ.6904/- ಅಭಿವೃದ್ಧಿ ಶುಲ್ಕ ಮತ್ತು ಹೆಚ್ಚುವರಿ ಆರಂಭಿಕ ಭದ್ರತಾ ಠೇವಣಿ + ಮೇಲ್ವಿಚಾರಣೆ ಶುಲ್ಕ ಭರಣ ಮಾಡಲು ಈಗಾಗಲೇ ಪತ್ರದ ಮೂಲಕ ಸದರಿ ಗ್ರಾಹಕರಿಗೆ ತಿಳಿಸಲಾಗಿರುತ್ತೆ.

III. ಸದರಿ ಮೊತ್ತವನ್ನು ಗ್ರಾಹಕರು ಇಲ್ಲಿಯವರೆಗೆ ಭರಣ ಮಾಡಿರುವುದಿಲ್ಲ ಎಂಬುದನ್ನು ತಿಳಿಸಲಾಗಿದೆ.

**<u>ಸಲ್ಲಿಸಿದ ದಾಖಲೆಗಳು</u> :-**

1. ಹಣ ಭರಣ ಮಾಡಲು ತಿಳಿಸಿರುವ ಪತ್ರಗಳು.
2. ಗ್ರಾಹಕರ ಅರ್ಜಿ, ಕಟ್ಟಡ ಪರವಾನಿಗೆ ಅರ್ಜಿ.
3. ಶಾಖಾಧಿಕಾರಿಗಳ ಸ್ಥಳ ಪರಿಶೀಲನಾ ವರದಿ.
4. ಇನ್ನಿತರೆ ದಾಖಲೆಗಳು.

**4. <u>ಈ ವಿವಾದದಲ್ಲಿ ವೇದಿಕೆಯು ಉತ್ತರಿಸಬೇಕಾದ ವಿಷಯಗಳು</u> :-**

I. ಸದರಿ ಕಟ್ಟಡವನ್ನು ಪ್ರತ್ಯೇಕವೆಂದು ಪರಿಗಣಿಸಲು ಅವಶ್ಯವಿರುವ ಸಂಬಂಧಪಟ್ಟ ದಾಖಲೆಗಳು [ಪ್ರತ್ಯೇಕ ಇ-ಸ್ವತ್ತು] ಇದೆಯೆ ?.

II. ನಗರಸಭೆಯಿಂದ ಸದರಿ ಕಟ್ಟಡಕ್ಕೆ ನೇರವಾಗಿ ಇರುವ ರಸ್ತೆಗೆ ಸಂಬಂಧಿಸಿದ ದಾಖಲೆಗಳು ಇದೆಯೆ ?.

**5. <u>ಚರ್ಚೆ ಹಾಗೂ ವಿಶ್ಲೇಷಣೆಯಲ್ಲಿ ಕಂಡು ಬಂದ ಅಂಶಗಳು</u> :-**

ಈ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಮತ್ತು ವಾದಿ ಹಾಗೂ ಪ್ರತಿವಾದಿಯವರ ಹೇಳಿಕೆಗಳನ್ನು ಆಲಿಸಿದ ನಂತರ ವೇದಿಕೆಯು ಈ ಕೆಳಕಂಡ ಅಂಶಗಳನ್ನು ಗಮನಿಸಿರುತ್ತದೆ :-

1. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸದರಿ ಕಟ್ಟಡಕ್ಕೆ ಪ್ರತ್ಯೇಕ ದಾರಿ/ ಕಟ್ಟಡವು ಪ್ರತ್ಯೇಕವಾಗಿರುತ್ತದೆ ಎಂದು ಗ್ರಾಹಕರು ದಾಖಲೆಗಳು ಇಲ್ಲದೇ ಮೌಖಿಕವಾಗಿ ತಿಳಿಯಪಡಿಸಿರುತ್ತಾರೆ.
2. ಗ್ರಾಹಕರು ಸಲ್ಲಿಸಿರುವ ದಾಖಲೆಗಳಲ್ಲಿ ಸದರಿ ಕಟ್ಟಡಕ್ಕೆ ನೇರವಾಗಿ ರಸ್ತೆ ಇಲ್ಲದಿರುವುದು ಹಾಗೂ 'ಎ', 'ಬಿ' ಮತ್ತು 'ಸಿ' ಕಟ್ಟಡಗಳಿಗೆ ಸಾಮಾನ್ಯ ಮರ್ಗ ಇರುವುದು [Common Passage] ಕಂಡು ಬಂದಿರುತ್ತದೆ.

3. ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ ಹಾವೇರಿ ಅಧ್ಯಕ್ಷರು ಹಾಗೂ ಸದಸ್ಯರು ಈ ಕುರಿತು ಒಮ್ಮತದ ಅಭಿಪ್ರಾಯದೊಂದಿಗೆ ಆದೇಶ ಮಾಡಿರುತ್ತಾರೆ.

**ಆದೇಶ ಸಂಖ್ಯೆ : ಹಾ/ಗ್ರಾಕುಕೊನಿವೇ/ಪ್ರ.ಸಂ-01/CR-29/2022-23/** 7090-97

**ದಿನಾಂಕ :** 19 SEP 2022

## ಆದೇಶ

1. ಸದರಿ "ಬಿ" & "ಸಿ" ಬ್ಲಾಕಗಳಿಗೆ ದಿನಾಂಕ : 06.10.1995 ರ ಕ್ಕಿಂತ ಪೂರ್ವದಲ್ಲಿ ಆಗಿನ ಚಾಲ್ತಿಯಲ್ಲಿ ಇರುವ ನಿಯಮಾನುಸಾರ ವಿದ್ಯುತ್ ಸಂಪರ್ಕವನ್ನು ನೀಡಿದ್ದು ಇರುತ್ತದೆ. ಆದರೆ ಈಗ ನಿರ್ಮಿಸಿರುವ ಕಟ್ಟಡದ ಆವರಣದಲ್ಲಿ "ಎ","ಬಿ" & "ಸಿ" ಕಟ್ಟಡಗಳು ಇರುವದರಿಂದ ಕೆ.ಇ.ಆರ್.ಸಿ ನಿಮಾವಳಿಗಳ 3.1.1 ರ ಪ್ರಕಾರ ಎಲ್ಲ ಭಾರವನ್ನು ಪರಿಗಣಿಸಬೇಕಾಗಿರುತ್ತದೆ ಎಂಬುದನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾರ್ಯ & ಪಾಲನಾ ಉಪ-ವಿಭಾಗ-1, ಹೆಸ್ಕಾಂ, ರಾಣೇಬೆನ್ನೂರ ರವರಿಗೆ ಆದೇಶಿಸಲಾಗಿದೆ.

2. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ನಮ್ಮ ಇಲಾಖೆಯ ಅಧಿಕಾರಿಗಳು ಸ್ಥಾನಿಕವಾಗಿ ಸ್ಥಳ ಪರಿಶೀಲಿಸಿದಾದ "ಎ" ಬ್ಲಾಕಗೆ ನಗರ ಸಭೆ ರಸ್ತೆಯಿಂದ ನೇರವಾಗಿ ದಾರಿ/ ರಸ್ತೆ ಇರುವುದಿಲ್ಲ. ಸದರಿ ಬ್ಲಾಕಿಗೆ ಹಾಗೂ "ಬಿ" ಮತ್ತು "ಸಿ" ಸೇರಿ ಮೂರು ಬ್ಲಾಕಗಳಿಗೆ "ಇ" ಬ್ಲಾಕಿನ ನೆಲ ಮಹಡಿಯ ಮುಖಾಂತರ ಸಾಮಾನ್ಯ ಮಾರ್ಗ [Common Passage] ಇರುತ್ತದೆ. ಆದ್ದರಿಂದ, ಆವರಣದಲ್ಲಿ ಇರುವ ಎಲ್ಲ ಕಟ್ಟಡಗಳನ್ನು ["ಎ" "ಬಿ" ಹಾಗೂ "ಸಿ"] ಪರಿಗಣಿಸಿ ವಿಸ್ತರ್ಣವು [ಬಿಲ್ಟ್‌ಫ್ ಏರಿಯಾ] 648.99 ಚದರು ಮೀಟರ್‌ಗಳಾಗಿದ್ದು, ಈಗ ಕೇಳಿರುವ ಲೋಡ್ ಸೇರಿದಂತೆ ಎಲ್ಲ ಆರ್.ಆರ್ ನಂಬರ್ [ಮೇಲೆ ತಿಳಿಸಿರುವ ಕಟ್ಟಡಗಳ] ಗಳ ಒಟ್ಟು ಲೋಡ್ 18 ಕಿ.ವ್ಯಾ ಆಗುತ್ತದೆ. ಹಾಲಿ ಚಾಲ್ತಿಯಲ್ಲಿರುವ COS ಖಂಡಿಕೆ 3.1.1 ಪ್ರಕಾರ 15 ಕಿ. ವ್ಯಾ. ಗಿಂತ ಹೆಚ್ಚಿನ 3 ಕಿ.ವ್ಯಾ.ಗೆ ಪ್ರತಿ ಕಿ.ವ್ಯಾಗೆ 1300+ ಜಿ.ಎಸ್.ಟಿ ಕಿ.ವ್ಯಾನಂತೆ ರೂ. 4602/- ಹಾಗೂ 15 ಕಿ. ವ್ಯಾ. ವರೆಗಿನ 3 ಕಿ.ವ್ಯಾ.ಗೆ ಪ್ರತಿ ಕಿ.ವ್ಯಾಗೆ 650+ ಜಿ.ಎಸ್.ಟಿ ಕಿ.ವ್ಯಾನಂತೆ ಒಟ್ಟು ರೂ.2302/- ಒಟ್ಟು ರೂ.6904/- ಅಭಿವೃದ್ಧಿ ಶುಲ್ಕ ಮತ್ತು ಹೆಚ್ಚುವರಿ ಆರಂಭಿಕ ಭದ್ರತಾ ಠೇವಣಿ + ಮೇಲ್ವಿಚಾರಣೆ ಶುಲ್ಕ ಭರಣ ಮಾಡಲು ಈಗಾಗಲೇ ಪತ್ರದ ಮೂಲಕ ಸದರಿ ಗ್ರಾಹಕರಿಗೆ ತಿಳಿಸಿರುವುದು ಕ್ರಮಬದ್ಧವಾಗಿರುತ್ತದೆ. ಈ ಪ್ರಯುಕ್ತ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.

| | | |
|---|---|---|
| ಗುರುಬಸಪ್ಪ. ಎಸ್. ಮಾಗಾವಿ,<br>ಸದಸ್ಯರು, ಗ್ರಾ.ಕು.ಕೊ.ನಿ.ವೇ,<br>ಹಾವೇರಿ ವೃತ್ತ, ಹೆಸ್ಕಾಂ, ಹಾವೇರಿ. | ರೇಣುಕಾ. ಎಲ್. ತೆಂಬದ,<br>ಉಪ-ಲೆಕ್ಕನಿಯಂತ್ರಣಾಧಿಕಾರಿ ಹಾಗೂ<br>ಸದಸ್ಯರು, ಗ್ರಾ.ಕು.ಕೊ.ನಿ.ವೇ, ಹಾವೇರಿ<br>ವೃತ್ತ, ಹೆಸ್ಕಾಂ, ಹಾವೇರಿ. | ನಾಗಪ್ಪ. ಎಸ್. ಹೆಚ್,<br>ಅಧೀಕ್ಷಕ ಇಂಜಿನೀಯರ(ವಿ) ಹಾಗೂ<br>ಸದಸ್ಯರು, ಗ್ರಾ.ಕು.ಕೊ.ನಿ.ವೇ, ಹಾವೇರಿ<br>ವೃತ್ತ, ಹೆಸ್ಕಾಂ, ಹಾವೇರಿ. |

<u>ಪ್ರತಿಯನ್ನು ಅವಗಾಹನೆಗಾಗಿ/ ಮಾಹಿತಿಗಾಗಿ</u> :

1. ಮುಖ್ಯ ಇಂಜಿನೀಯರ(ವಿ), ಹುಬ್ಬಳ್ಳಿ ವಲಯ ಹೆಸ್ಕಾಂ, ಶಿವಗಂಗಾ ಕಾಲೋನಿ, ಕೇಶ್ವಾಪೂರ, ಕುಸಗಲ್ ರೋಡ್, ಹುಬ್ಬಳ್ಳಿ.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ನಿಗಮ ಕಛೇರಿ, ಹೆಸ್ಕಾಂ, ನವನಗರ, ಹುಬ್ಬಳ್ಳಿ.
3. ಉಪ-ಲೆಕ್ಕನಿಯಂತ್ರಣಾಧಿಕಾರಿಗಳು, ಕಾರ್ಯ & ಪಾಲನಾ ವೃತ್ತ, ಹೆಸ್ಕಾಂ, ಹಾವೇರಿ.
4. ಶ್ರೀ. ಗುರುಬಸಪ್ಪ. ಎಸ್. ಮಾಗಾವಿ, ಸಿ.ಜಿ.ಆರ್.ಎಫ್ ಸದಸ್ಯರು, ಹಾವೇರಿ.

5. ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾರ್ಯ & ಪಾಲನಾ ವಿಭಾಗ, ಹೆಸ್ಕಾಂ, ರಾಣೇಬೆನ್ನೂರ.

6. ಕಾರ್ಯನಿರ್ವಾಹಕ ಇಂಜಿನೀಯರ(ವಿ), ನಿಯಂತ್ರಣಾ ಆಯೋಗ ವ್ಯವಹಾರಗಳು, ಹೆಸ್ಕಾಂ, ನಿಗಮ ಕಛೇರಿ, ನವನಗರ ಹುಬ್ಬಳ್ಳಿ.

7. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾರ್ಯ & ಪಾಲನಾ ಉಪ-ವಿಭಾಗ-1, ಹೆಸ್ಕಾಂ, ರಾಣೇಬೆನ್ನೂರ.

8. ಶ್ರೀಮತಿ. ಸುಶೀಲಾ. ವಿ. ಕೆರೂಡಿ, ಕೆರೂಡಿ ಕಾಂಪ್ಲೆಕ್ಸ್, ಅಶೋಕ ವೃತ್ತ, ರಾಣೇಬೆನ್ನೂರ, ತಾ॥ ರಾಣೇಬೆನ್ನೂರ, ಜಿ॥ ಹಾವೇರಿ, ಪಿನ್ ಕೋಡ್ : 581115 ರವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ. **[ನೊಂದಣಿ ಅಂಚೆ & ಸ್ವೀಕೃತಿ ಮುಖಾಂತರ]**.

9. ಕಛೇರಿ ಕಡತ/ ಮಹಾ ಕಡತ.